(MR. SPEAKER.)

questioning the ruling. I have looked into the rulings, as far as other Legislatures are concerned. I have been saying that this has been followed in the Bombay Assembly many times. We have never allowed a single member to mention names in the Bombay Legislative Assembly when it amounted to a man being defamed or when an insinuation was sought to be made.

PRIVILEGE MOTION.

re. **Minister's reference in a public speech to anticipated income before presentation of Budget.**

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ ನಾನು ಹಿಂದೆ ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿಕೊಟ್ಟಿದ್ದೆ; ಅದು ಏನಾಯಿತು?

ಅಧ್ಯಕ್ಷರು.—ಯಾವ ಪ್ರಿವಿಲೇಜ್ ಮೋಷನ್?

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮಾನ್ಯ ಮಂತ್ರಿಗಳಾದ ಶ್ರೀ ಎಚ್. ಎಸ್. ರುದ್ರಪ್ಪನವರ ಭಾಷಣದ ವಿಷಯದಲ್ಲಿ ಅಧ್ಯಕ್ಷರಿಗೆ ಕಳುಹಿಸಿಕೊಟ್ಟಿದ್ದೆ.

ಅಧ್ಯಕ್ಷರು.—ಅದನ್ನು ನಾನು ನೋಡಿದ್ದೇನೆ. ಅವರು ಏನು ರಿಮಾರ್ಕ್ ಮಾಡಿದ್ದಾರೋ ಅದನ್ನೂ ನೋಡಿದ್ದೇನೆ. ಅವರು ಹೀಗೆ ರಿಮಾರ್ಕ್ ಮಾಡಿದ್ದಾರೆ: "ಸುಮಾರು 15 ಲಕ್ಷ ಒದಗಿಸಿದೆ. ಬಜೆಟ್ ಸಭೆಯ ಮುಂದೆ ಮಂಡಿಸುವಾಗ ಖರ್ಚು ಖಚಿತವಾಗಿ ಗೊತ್ತಾಗುತ್ತದೆ" ಇದರ ಅರ್ಥ ಬಜೆಟ್‌ನಲ್ಲಿ 15 ಲಕ್ಷ ಇದೆಯೆಂದು ಸ್ಪಷ್ಟವಾಗಿ ಹೇಳಿದಂತೆ ಆಗುವುದಿಲ್ಲ. ಇದರ ಅರ್ಥ ಏನಾಗುತ್ತದೆ, ಎಂದರೆ ಬಜೆಟ್ ಸಭೆಯ ಮುಂದೆ ಬರುತ್ತದೆ. ಆಗ ಖಚಿತವಾಗಿ ಗೊತ್ತಾಗುತ್ತದೆ. ಸುಮಾರು 15 ಲಕ್ಷ ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ಒಂದು ವೇಳೆ ಅವರು ಒಂದು ತಪ್ಪು ಮಾಡಿದ್ದಾರೆ, ಹೇಳಬಾರದಾಗಿತ್ತು, ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ ಎನ್ನುವ ಪ್ರಶ್ನೆ ಇದೆ. ಇಂತಹ ಒಂದು ಪ್ರಶ್ನೆ ಬಂದಾಗ ಲೋಕ ಸಭೆಯಲ್ಲಿ ಒಂದು ರೂಲಿಂಗ್ ಕೊಟ್ಟಿದ್ದಾರೆ. ಆ ರೂಲಿಂಗ್ ಓದಿದರೆ ತಮಗೆ ಅರ್ಥವಾಗುತ್ತದೆ. ಅದು ಹೀಗಿದೆ.

> "In the matter of determination of the privileges of the House we are governed by the provisions of article 105 (3) of our Constitution, which state that the powers, privileges and immunities of the House are such as were enjoyed by the House of Commons in the United Kingdom at the commencement of our Constitution. The precedents of the United Kingdom should guide us in determining whether any breach of privilege was in fact committed in the present case. So far as I can gather, only two cases occurred in which the House of Commons took notice of the leakage of the budget proposals. They are known as the Thomas case and the Dalton case. In neither of these cases was the leakage treated as a breach of privileges of the House nor were the cases sent to the Committee of Privileges for enquiry . . . ."

I shall read the relevant sentence once again.

> "In neither of these cases was the leakage treated as a breach of privileges of the House nor were the cases sent to the Committee of Privileges for enquiry. The prevailing view in the House of Commons is that until the financial proposals are placed before the House of Commons, they are an official secret. A reference of the present leakage to the Committee of Privileges does not therefore arise."

ಅವರು ಒಂದುವೇಳೆ ಬಡ್ಜೆಟ್ ಪ್ರಪೋಸಲ್ಸ್ ವಿಚಾರವನ್ನು ಹೇಳಿದ್ದರೂ ಕೂಡ ಅದು Official Secrets Actನ ಪ್ರಕಾರ ತಪ್ಪಾಗುತ್ತದೆಯೇ ಹೊರತು breach of privilege ಆಗುವುದಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ, ಈ ಸಭೆಯಲ್ಲಿ ಮೊದಲಿನಿಂದಲೂ ಯಾವುದು ಸಂಪ್ರದಾಯವಾಗಿ ಬಂದಿದೆಯೋ ಅದು ಸರಿಯಾಗಿ ನಡೆದುಕೊಂಡು ಬರಲೆಂದು ನಾನು ಈ ಹಕ್ಕು ಬಾಧ್ಯತೆಯ ಸೂಚನೆಯನ್ನು ಕಳುಹಿಸಿದ್ದೇನೆಯೇ ವಿನಾ ಮಾನ್ಯ ಮಂತ್ರಿಗಳಿಗೇನಾದರೂ ತೊಂದರೆ ಯಾಗಲೆಂದೇ ಅಥವಾ ಅವರು ಸಭೆಯ ಕ್ಷಮಾಪಣೆ ಕೇಳಲೆಂದೋ ಉದ್ದೇಶಿಸಿ ಕಳುಹಿಸಿಲ್ಲ . . . .

ಶ್ರೀ ಎಚ್. ಹುಚ್ಚಮಾಸ್ತಿ ಗೌಡ (ಚೆಂದ್ರಶೇಖರ ಪುರ).—ಈಗ ತಾನೇ ತಾವು ಇದು Question of Privilege ಆಗುವುದಿಲ್ಲವೆಂದು ತೀರ್ಮಾನ ಹೇಳಿದ ಮೇಲೆ ಮತ್ತೆ ಅದರ ಮೇಲೆ ಚರ್ಚೆಮಾಡುವುದಕ್ಕೆ ಅವಕಾಶ ಕೊಡಬಾರದೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ಅವರು ಸಂಪ್ರದಾಯದ ವಿಚಾರವನ್ನು ಹೇಳುತ್ತಿದ್ದಾರೆ; ಅದನ್ನು ಕೇಳೋಣವೆಂದು ಸುಮ್ಮನಿದ್ದೆ. ಯಾವ ರೂಪದಲ್ಲಿಯಾದರೂ ನನ್ನ 'ರೂಲಿಂಗ್' ಬಗ್ಗೆ ಪ್ರಶ್ನೆಮಾಡುವುದು ಸೂಕ್ತವಲ್ಲ. ಇದನ್ನು challenge ಮಾಡುವುದಕ್ಕೆ ಯಾರಿಗೂ ಯಾವ ಸಂದರ್ಭದಲ್ಲಿಯೂ ಅವಕಾಶಕೊಡುವುದಿಲ್ಲ. ರೂಲಿಂಗ್‌ನಲ್ಲಿ ತಪ್ಪಿರಬಹುದು. ಆದರೂ ಅದನ್ನು challenge ಮಾಡಬಾರದೆಂಬುದು ಸಂಪ್ರದಾಯ.

Sri H. M. CHANNABASAPPA (Krishnarajanagar).—I rise to a point of order. It is not correct for any Hon'ble Member to speak anything in

connection with a motion once a ruling is given. If 'sampradaya' has got to be heard by us, the House has got a right to hear what 'sampradaya' I also have got to say.

ತಾವು ಸಂಪ್ರದಾಯದ ವಿಷಯವನ್ನು ಹೇಳಿದಿರಿ, ಅದರಮೇಲೆ ನಾನು ಮಾತನಾಡದೆ ಸುಮ್ಮನೆ ಕುಳಿತುಕೊಂಡೆ. ಈಗ ಅವರಿಗೆ ಸಂಪ್ರದಾಯದ ವಿಷಯ ಹೇಳುವುದಕ್ಕೆ ಅವಕಾಶಕೊಟ್ಟರೆ, ನಾನೂ ಹೇಳಬೇಕಾಗುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅಧ್ಯಕ್ಷರ ರೂಲಿಂಗ್ challenge ಮಾಡುವುದಕ್ಕಾಗಿ ನಾನು ಈ ಸಭೆಗೆ ಬಂದಿಲ್ಲ; ಸಭೆಯ ಸದಸ್ಯನಾಗಿ ಅಧ್ಯಕ್ಷರ ರೂಲಿಂಗನ್ನು ಪರಿಪಾಲನಬೇಕೆಂಬ ಜ್ಞಾನ ನನಗಿದೆ. ನಾನು ಈ ಸಂಪ್ರದಾಯವನ್ನು ಪಾಲಿಸಿ, ಇದಕ್ಕೆ ವಿರೋಧವಾಗಿ ನಡೆಯದೇ ಇರುವ ಮನುಷ್ಯನೆಂಬ ನಂಬಿಕೆಯಿಂದ ನನ್ನನ್ನು ಸದಸ್ಯನಾಗಿ ಚುನಾಯಿಸಿ ಇಲ್ಲಿಗೆ ಕಳುಹಿಸಿದ್ದಾರೆ. ಇದನ್ನು ಅವರು ತಿಳಿದುಕೊಳ್ಳಬೇಕು. ಎರಡೇ ಮಾತುಗಳಲ್ಲಿ ಹೇಳುವುದಾದರೆ, ಈ ಸಭೆಯಲ್ಲಿ ನಾವು ಹಿಂದಿನಿಂದಲೂ ಯಾವ ಪದ್ಧತಿಯನ್ನನುಸರಿಸುತ್ತಿದ್ದೇವೆಂದರೆ, ನಮ್ಮ ಹಣಕಾಸಿನ ಸಚಿವರು ಒಡ್ಡಿಟ್ಟನ್ನು ನಮ್ಮ ಮುಂದೆ ಮಂಡಿಸುವವರೆಗೂ ಆ ಬಡ್ಜೆಟ್ಟಿಗೆ ಸಂಬಂಧಪಟ್ಟಂತೆ ಮುಂದಿನ ವರ್ಷದ ಆಯವ್ಯಯದ ವಿಚಾರದಲ್ಲಿ ಯಾವ ಮಂತ್ರಿಗಳೇ ಆಗಲಿ ಅಂಕಿಅಂಶಗಳನ್ನು ಯಾವ ಸಂದರ್ಭದಲ್ಲಿಯೂ ಕೊಡುವ ಪದ್ಧತಿ ಇರಲಿಲ್ಲ . . . .

ಅಧ್ಯಕ್ಷರು.—ಹಾಗಾದರೆ ಈ ಪದ್ಧತಿ ನನಗೆ ಗೊತ್ತಿರಲಿಲ್ಲವೆ? ತಾವು ಈ ಮನೆಯ ಕಾಲಹರಣವನ್ನು ಮಾಡುತ್ತಿದ್ದೀರಿ; ಇನ್ನೇನೂ ಇಲ್ಲ. ನಾನು ಮತ್ತೊಮ್ಮೆ ಹೇಳುತ್ತೇನೆ. ತಾವು Breach of Privilege Motion ಎಂದು ಕೊಟ್ಟಿದ್ದೀರಿ. Breach of privilege ಆಗಿಲ್ಲವೆಂದು ನಾನು ಹೇಳುತ್ತಿದ್ದೇನೆ. ಇದರಲ್ಲಿ ಯಾವ ಸಂಪ್ರದಾಯವೂ ಇಲ್ಲ. ಸಂಪ್ರದಾಯವನ್ನು ನಾನು ನೋಡಿಕೊಳ್ಳುತ್ತಿದ್ದೇನೆ. ಇದು Official Secrets Act ಪ್ರಕಾರ ತಪ್ಪಾಗಬಹುದೋ ಏನೋ ಎಂದು ನಾನು ಹೇಳಿದ್ದೇನೆ. ಈ ದೃಷ್ಟಿಯಿಂದ ಇದನ್ನು ಪರೀಕ್ಷಿಸಬಹುದಾಗಿದೆ. It has to be investigated. I cannot say on the spot. So far as my opinion is concerned, I keep it as an open book. The only point is that the Hon'ble Member should not take the time of the House in this way. I request the Hon'ble Member Sri Puttaramiya that once the ruling has been given that it is not a breach of privilege, the Hon'ble Member will note this thing and respect the ruling.

Sri B. K. PUTTARAMIYA.—I respect the ruling. Meanwhile I want to say . . . .

Mr. SPEAKER.—No. I cannot allow him to proceed further. The Hon'ble Member may resume his seat. It is not fair to take the time of the House.

BUDGET FOR 1957-58 DEMANDS FOR GRANTS.

Sri M. C. NARASIMHAN (Kolar Gold Fields).—I made a representation about the procedure of discussion on the General Administration Grant. Yesterday it was suggested that discussion would not proceed on the basis of cut motions and that there would be general discussion. There is one difficulty in this. In the other procedure we would be getting slightly more time.

Mr. SPEAKER.—You are not correct. If the cut motions are allowed to be moved, the Hon'ble Members will have two minutes each.

Sri M. C. NARASIMHAN.—In respect of each cut motion, five minutes should be allowed.

Mr. SPEAKER.—For each cut motion ?

Sri M. C. NARASIMHAN.—I think so. The difficulty is, if one has to speak about the entire thing within 5 or 7 minutes, it becomes difficult for some of the members.

Mr. SPEAKER.—If the Hon'ble Member wants to move cut motions, I have no objection but I won't give him more than two minutes. He may choose either of the two. If there are 100 cut motions, then each will get two minutes. Let him profit by my own experience which covers over a period of eleven years.

DEMAND No. 13— GENERAL ADMINISTRATION

25. General Administration (except the sub-major heads B and C)

Mr. SPEAKER.—Motion moved :

"That a sum not exceeding Rs. 2,20,52,900 be granted to the Government to defray the charges which will come in course of payment during the year ending 31st day of March 1958, in respect of 'General Administration (Except the sub-major heads B and C)'."